Mr. SPEAKER.—The Hon'ble Minister has already stated that it is not available.

Sri B. R. SUNTHANKAR.—Why is this inordinate delay in the appointment of teachers ?

Sri B. D. JATTI.—There was no inordinate delay. The ratio between the pupils and teachers was fixed and according to that the number of teachers was increased.

Grant of Darkhast Land to Thungabhadra Sugar Company, Shimoga.

*Q.—114. **Sri T. D. DEVENDRAPPA** (Bhadravati).—

Will the Government be pleased to state :—

(*a*) the extent of Dharkhast land granted to Thungabhadra Sugar Company, Shimoga ;

(*b*) the terms on which the land has been granted ;

(*c*) out of the land so granted the extent of land cultivated and the extent of land laying fallow so far ?

A.—**Sri M. V. KRISHNAPPA** (Minister for Revenue).—

(*a*) 2,264 acres 6 guntas of land have been leased to Tungabhadra Sugar Company, Shimoga, in Shimoga and Chickmagalur Districts for sugarcane cultivation.

(*b*) The land has been leased for 30 years on an annual rent at the following rates :—

(i)	For the	1st 5 years	at Rs.	5	per acre per annum.
(ii)	,,	6 th year	,,	50	,,
(iii)	,,	7	,,	60	,,
(iv)	,,	8	,,	70	,,
(v)	,,	9	,,	80	,,
(vi)	,,	10	,,	90	,,
(vii)	,,	11	and onwards	100	,,

(*c*) Land cultivated ... 361 Acres
Land not cultivated ... 1,903-06 Acres

ಶ್ರೀ ಟಿ. ಡಿ. ದೇವೇಂದ್ರಪ್ಪ.—ತುಂಗಭದ್ರಾ ಸಕ್ಕರೆ ಕಂಪೆನಿಯವರಿಗಾಗಿ ಭದ್ರಾವತಿ ತಾಲ್ಲೂಕಿನಲ್ಲಿ ಮತ್ತು ಶಿವಮೊಗ್ಗ ತಾಲ್ಲೂಕಿನಲ್ಲಿ ಎಷ್ಟು ಎಕರೆಗಳಷ್ಟು ಭೂಮಿಯನ್ನು ಕೊಟ್ಟಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಒಟ್ಟು 2,264 ಎಕರೆ ಆರು ಗುಂಟೆಗಳಷ್ಟು ಕೊಡಲಾಗಿದೆ. ಇದರಲ್ಲಿ ಶಿವಮೊಗ್ಗ ಮತ್ತು ಭದ್ರಾವತಿ ಈ ಎರಡಕ್ಕೂ ಸೇರಿ 1,420 ಎಕರೆ ಆರು ಗುಂಟೆಗಳಷ್ಟು ಕೊಟ್ಟಿದೆ. ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನಲ್ಲಿ 844 ಎಕರೆಗಳಷ್ಟು ಕೊಡಲಾಗಿದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈಗ ಕೊಟ್ಟಿರುವ ಭೂಮಿಯನ್ನು ಯಾವ ಷರತ್ತಿನ ಮೇಲೆ ಕೊಟ್ಟಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಭೂಮಿಯನ್ನು ಅವರು ಸಾಗುವಳಿ ಮಾಡಿ ಕಬ್ಬನ್ನು ಬೆಳೆಯಬೇಕು ಎಂದು ಮೂವತ್ತು ವರ್ಷಗಳ ಲೀಸಿನ ಮೇಲೆ ಕೊಡಲಾಗಿದೆ. ಮೂವತ್ತು ವರ್ಷಗಳಾದ ಮೇಲೆ ಸರಕಾರ ತೆಗೆದುಕೊಂಡು ಮುಂದೆ ಏನುಬೇಕಾದರೂ ಮಾಡಬಹುದು.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಅವಿಗಾಗಿ ಕೊಟ್ಟಿರುವುದರಲ್ಲಿ 1,903 ಎಕರೆ 6 ಗುಂಟೆ ಗಳಷ್ಟು ಭೂಮಿ ಬೀಳಿನಲ್ಲಿದೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಹೀಗೆ ಸಾಗುವಳಿ ಇಲ್ಲದಿರುವ ಭೂಮಿಯನ್ನು ಸರಕಾರ ತೆಗೆದುಕೊಂಡು ಭೂಮಿ ಇಲ್ಲದವರಿಗೆ ಏಕೆ ಹಂಚಬಾರದು ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದಕ್ಕೆ ಕಾರಣವನ್ನು ಕೊಟ್ಟಿದ್ದಾರೆ. ಅವರಿಗೆ ಭದ್ರಾ ಜಲಾಶಯ ದಿಂದ ಇನ್ನೂ ನೀರು ಕೊಟ್ಟಿಲ್ಲ. ಇದೂ ಕೂಡ ನಿಜವಾದ ಕಾರಣವಾಗಿರುವುದರಿಂದ ಇದನ್ನು ಬೇರೆಯವರಿಗೆ ಕೊಡುವುದಕ್ಕಾಗುವುದಿಲ್ಲ. ಅದೂ ಅಲ್ಲದೆ ಈ ಸಕ್ಕರೆ ಕಾರ್ಖಾನೆಯನ್ನು ಹೊಸದಾಗಿ ಸ್ಥಾಪಿಸಲು ಆಫ್ರಿಕಾದಿಂದ ಯಂತ್ರಗಳನ್ನು ತರಿಸಿ ಆರಂಭ ಮಾಡಿ ಮರೆನಾಡಿನಲ್ಲಿ ಕಬ್ಬಿನ ಬೆಳೆಯನ್ನು ಅಭಿವೃದ್ಧಿ ಮಾಡಿ ತರುವುದಕ್ಕೋಸ್ಕರ ಈ ಭೂಮಿಯನ್ನು ಕೊಟ್ಟಿದೆ. ಇಲ್ಲಿನ ಜನಕ್ಕೆ ಆದಷ್ಟು ಸಹಾಯ ಮಾಡಿ ಕಬ್ಬಿನ ಬೆಳೆ ಬೆಳೆಯುವ ಹಾಗೆ ಮಾಡಬೇಕು.

ಶ್ರೀ ಟಿ. ಡಿ. ದೇವೇಂದ್ರಪ್ಪ.—1,903 ಎಕರೆ 6 ಗುಂಟೆ ಜಮೀನು ಸಾಗುವಳಿಯಾಗಿಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಸಾಗುವಳಿ ಮಾಡತಕ್ಕಂಥ ಜಮೀನನ್ನು ಸಾಗುವಳಿ ಮಾಡುವವರಿಗೆ ಬಿಡಿಸಿ ಕೊಡುವುದಕ್ಕೆ ಮಂತ್ರಿಗಳು ಯೋಚನೆ ಮಾಡುತ್ತಾರೆಯೆ ?

ಶ್ರೀ ಎಂ. ವಿ. ಕೃಷ್ಣಪ್ಪ. —ಮರೆನಾಡು ಅಭಿವೃದ್ಧಿಗಾಗಿ ಈ ಸಕ್ಕರೆ ಕಾರ್ಖಾನೆ ಪ್ರಾರಂಭಿಸಿ ರುವುದರಿಂದ ಎಲ್ಲ ರೀತಿ ಸಹಾಯ ಕೊಡಬೇಕಾದುದು ನಮ್ಮ ಕರ್ತವ್ಯ. ಸಾಕಷ್ಟು ಕಬ್ಬು ಪೂರೈಕೆ ಈಗ ಆಗುತ್ತಿಲ್ಲ. ಶೇಕಡ 25ರಷ್ಟು ಕಬ್ಬು ಪೂರೈಕೆಯಾಗುತ್ತಿದೆ. ಇನ್ನೂ ಶೇಕಡ 75ರಷ್ಟು ಆಗ ಬೇಕಾಗಿದೆ. ರೈತರು ಹೆಚ್ಚು ಕಬ್ಬು ಬೆಳೆದರೆ ದೇಶಕ್ಕೆ ಒಳ್ಳೆಯದಾಗುತ್ತದೆ.

ಶ್ರೀ ವಿ. ಎಂ. ದೇವ್.—ಟ್ರಾ್ಯಕ್ಟರ್ಸ್ ಇಟ್ಟುಕೊಂಡು ಅವರು ಸ್ವತಃ ಸಾಗುವಳಿ ಮಾಡು ತ್ತಿದ್ದಾರೆಯೇ ? ಎಷ್ಟು ಟ್ರಾ್ಯಕ್ಟರ್ ಇವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಂಪನಿಯವರು ಟ್ರಾ್ಯಕ್ಟರ್ ಇಟ್ಟುಕೊಂಡು ಸ್ವಂತ ಸಾಗುವಳಿ ಮಾಡುತ್ತಿದ್ದಾರೆ. ಬಹುಶಃ 361 ಎಕರೆ ಭೂಮಿಗೆ ಮೂರು ನಾಲ್ಕು ಟ್ರಾ್ಯಕ್ಟರು ಬೇಕಾಗಬಹುದು.

ಶ್ರೀ ವಿ. ಎಂ. ದೇವ್.—ಸಾಗುವಳಿಯಾಗದೇ ಇರುವ ಭೂಮಿಯನ್ನು ಬೇರೆ ರೈತರಿಗೆ ಕೊಟ್ಟರೆ ಉಪಯೋಗವಾಗುವುದಿಲ್ಲವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಫ್ಯಾಕ್ಟರಿ ಪ್ರಾರಂಭವಾಗಿ ಏಳು ವರ್ಷಗಳಾದರೂ ಆ ಪ್ರದೇಶದಲ್ಲಿ ರೈತರು ಕಬ್ಬು ಸಾಕಷ್ಟು ಬೆಳೆಯುತ್ತಿಲ್ಲ. ಶೇಕಡ 25 ರಷ್ಟು ಮಾತ್ರ ಪೂರೈಕೆಯಾಗುತ್ತಿದೆ. ಇನ್ನೂ ಶೇಕಡ 75 ರಷ್ಟು ಬೇಕಾಗುತ್ತದೆ. ರೈತರಲ್ಲಿ ಕಬ್ಬು ಬೆಳೆಯುವ ಬಗ್ಗೆ ಆಸ್ಥೆ ಉತ್ಸಾಹ ಕಂಡು ಬರುತ್ತಿಲ್ಲ.

ಶ್ರೀ ವಿ. ಎಂ. ದೇವ್.—ಸಾವಿರಾರು ಎಕರೆ ಬಂಜರು ಭೂಮಿ ಇರುವುದನ್ನು ಕಬ್ಬು ಬೆಳೆಯು ವುದಕ್ಕೆ ಕೊಡುವುದಕ್ಕೆ ಸರಕಾರ ಪರಿಶೀಲಿಸುವುದೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಂಜರು ಭೂಮಿಯ ನ್ನು ಸಾಗುವಳಿಗೆಗೆ ಕೊಡುವುದು ಬೇರೆ ವಿಚಾರ. ಈ ಪ್ರದೇಶದಲ್ಲಿ ಸರಿಯಾಗಿ ನೀರು ಒದಗಿಸದೇ ಇರುವ ಮೂಲಕ ಸಾಗುವಳಿ ಮಾಡಲು ಸಾಧ್ಯವಾಗಿಲ್ಲ.

ಶ್ರೀ ಜೆ. ದೇವಯ್ಯ.—ಒಂದು ಟನ್ ಕಬ್ಬಿಗೆ ಯಾವ ದರ ಕೊಡುತ್ತಾರೆ ?

ಶ್ರೀ ಎಂ ವಿ. ಕೃಷ್ಣಪ್ಪ.—ಮಂಡ್ಯದಲ್ಲಿ ಕೊಡುವ ದರವನ್ನು ಇಲ್ಲಿಯೂ ಕೊಡುತ್ತಾರೆ. ರೂಲ್ಸ್ ಪ್ರಕಾರ ಒಂದು ಟನ್ ಕಬ್ಬಿಗೆ 43-48 ರೂಪಾಯಿ ದರ ಕೊಡುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—2,264 ಎಕರೆ ಜಮೀನನ್ನು ಸಕ್ಕರೆ ಕಂಪೆನಿಯವರಿಗೆ ಕಬ್ಬನ್ನು ಬೆಳೆಯು ವುದಕ್ಕಾಗಿ ಗುತ್ತಿಗೆಗೆ ಕೊಡಲಾಗಿದೆಂದು ಹೇಳಿದೆ. ಈ ಪ್ರದೇಶದಲ್ಲಿ ಅರಣ್ಯ ಸಂಪತ್ತನ್ನು ಮಾರಾಟ ಮಾಡಿದುದರಿಂದ ಎಷ್ಟು ಪೊತ್ತ ಸರಕಾರಕ್ಕೆ ಬಂದಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದಕ್ಕೆ ಬೇರೆ ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇವೆ.

ಶ್ರೀ ಜಿ. ವಿ. ಗೌಡ.—ರೈತರಿಗೆ ನೀರು ಒದಗಿಸಲು ಇನ್ನೂ ಎಷ್ಟು ದಿವಸಗಳು ಬೇಕು ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದೊಂದು ದೊಡ್ಡ ಯೋಜನೆ. ಇನ್ನೂ ನಾಲ್ಕೈದು ವರ್ಷ ಆಗುತ್ತದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಮೊದಲನೆಯ 5 ವರ್ಷಗಳವರೆಗೆ ಒಂದು ಎಕರೆಗೆ ವರ್ಷಕ್ಕೆ 5 ರೂಪಾಯಿಗೆ 30 ವರ್ಷಗಳವರೆಗೆ ಲೀಜ್ ಕೊಡಲಾಗಿದೆ. ನೂರಾರು ಎಕರೆ ಜಮೀನನ್ನು ಮಾಲೀಕತ್ವದಲ್ಲಿ ಕೊಡಲಾಗಿದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿಲ್ಲವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾಲೀಕತ್ವ ಕೊಡುವುದಕ್ಕೆ ರೂಲ್ಸ್ ಇವೆ; ಬೇರೆ ಕಾನೂನು ಇದೆ. ಆ ರೀತಿ ಕೊಡುವಾಗ್ಗೆ ಅರಣ್ಯ ಇಲಾಖೆಯವರು ಹರಾಜು ಹಾಕುತ್ತಾರೆ. ಲಕ್ಷಾಂತರ ರೂಪಾಯಿ ಸಂಪಾದನೆಯ ದೃಷ್ಟಿ ಇದರಲ್ಲಿಲ್ಲ. 5 ವರ್ಷಗಳವರೆಗೆ ಒಂದು ಎಕರೆಗೆ 5 ರೂಪಾಯಿ ಗಳಂತೆ ಗುತ್ತಿಗೆಗೆ ಕೊಡಲಾಗಿದೆ. ಐದು ವರ್ಷಗಳ ನಂತರ ಅದು ಹೆಚ್ಚುತ್ತಾ ಹೋಗುತ್ತದೆ.

Mr. SPEAKER.—When was it given ?

Sri M. V. KRISHNAPPA.—It was given in 1957, Sir.

Mr. SPEAKER.—And he is questioning in 1963 !

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಷ್ಟು ಹಣ ಸರಕಾರಕ್ಕೆ ಈ ಮೂಲಕ ಬಂದಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದಕ್ಕೆ ಉತ್ತರ ಹೇಳಿದೆ.

Mr. SPEAKER.—This being an old matter perhaps the information sought by the member may not be available on an interpellation like this. That is an old matter.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ರೀತಿ ಕೊಡುವುದರಲ್ಲಿ ಭೇದಭಾವ ಮಾಡಿದ ಹಾಗೆ ಆಗುತ್ತದೆ. ಸರಕಾರಕ್ಕೆ ಎಷ್ಟು ಹಣ ಬಂದಿದೆ ಮತ್ತು ಅದರ ಉದ್ದೇಶವೇನು ಎಂಬುದನ್ನು ಹೇಳುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದಕ್ಕೆ ನೋಟೀಸ್ ಕೊಟ್ಟರೆ ಉತ್ತರ ಹೇಳುತ್ತೇನೆ.

Mr. SPEAKER.—At the moment who remembers all this ? The Hon'ble Minister may kindly furnish it later.

Sri M. V. KRISHNAPPA.—I will certainly do it, Sir.

Sri G. V. GOWDA.—At least what rent was collected for this land ? Whether rent has been collected at all ?

ಶ್ರೀ ಎಂ. ವಿ. ಕೃಷ್ಣಪ್ಪ.—ಮೊದಲನೆಯ 5 ವರ್ಷಗಳಿಗೆ ಎಕರೆ ಒಂದಕ್ಕೆ ಒಂದು ವರ್ಷಕ್ಕೆ 5 ರೂಪಾಯಿ ರೆಂಟ್ ಗೊತ್ತು ಮಾಡಿದೆ. 6ನೇ ವರ್ಷಕ್ಕೆ 50 ರೂಪಾಯಿಗಳು, 7ನೇ ವರ್ಷಕ್ಕೆ 60 ರೂಪಾಯಿಗಳು, 8ನೇ ವರ್ಷಕ್ಕೆ 70 ರೂಪಾಯಿಗಳು, 9ನೇ ವರ್ಷಕ್ಕೆ 80 ರೂಪಾಯಿಗಳು, 10ನೇ ವರ್ಷಕ್ಕೆ 90 ರೂಪಾಯಿಗಳು, 11ನೇ ವರ್ಷಕ್ಕೆ ಮತ್ತು ಅಲ್ಲಿಂದಾಚೆಗೆ 100 ರೂಪಾಯಿ ಎಂದಿದೆ. ಆದರೆ ನೀರು ಸರಿಯಾಗಿ ಒದಗಿಸದೇ ಇರುವ ಮೂಲಕ ಈಗಾಗಲೇ ರೆಮಿಷನ್ ಕೊಡ ಬೇಕೆಂದು ಅವರು ಕೇಳಿದ್ದಾರೆ. ಬೇರೆ ಫೈಲಿನಲ್ಲಿ ಈ ವಿಷಯದ ಪರಿಶೀಲನೆ ನಡೆದಿದೆ.

ಶ್ರೀ ವಿ. ಎಂ. ದೇವ್.—ಹಣ ವಸೂಲ್ಮಾಡದೇ ಇದ್ದರೆ ತೊಂದರೆಯಾಗುತ್ತದೆ. ಸಾಗುವಳಿ ಮಾಡುವುದಕ್ಕೆ ರೈತರಿಗೆ ಎಲ್ಲ ರೀತಿಯ ಸಹಾಯ ಮಾಡುವುದು ನೀರು ಒದಗಿಸುವುದು ಸರಕಾರದ ಕರ್ತವ್ಯವಾಗಿದೆ. ಇದು ಸರಕಾರದ ಗಮನಕ್ಕೆ ಬಂದಿದೆಯೆ ?

Mr. SPEAKER.—I will not allow that question. I want to tell the Hon'ble Member that he should not go on criticising the Government during the question-hour. These supplementaries are intended to elicit information and not to offer criticism.

Sri V. M. DEO.—I want to submit one point very seriously, Sir. At the time when we were elected, you said that you would help us. I was trying to put the question in order to elicit information, but I could not get it straight. In such matters, I request you to help me, Sir.

Mr. SPEAKER.—The member says : 'on account of the delay and an account of no proper attention being given by the Government, so much amount has been kept in arrears'. That is probably his point.

Sri M. V. KRISHNAPPA.—Sir, the Bhadra Project could not be finished in time and so the water could not be supplied in order to bring all the land under cultivation. So, the company has claimed some remission. There is a rule under which they get the right to ask for remission under certain circumstances. Government will examine it and find out if they are entitled to any remission.

9-00 A.M.

ಶ್ರೀ ಎಸ್. ಶಿವಪ್ಪ.—ನಕ್ಕರೆ ಕಾರ್ಖಾನೆ ಪ್ರಾರಂಭವಾಗಿ ಸುಮಾರು ಏಳು ವರ್ಷಗಳಾದರೂ ಇನ್ನೂ ಫಲಪ್ರದವಾಗಿ ಕೆಲಸ ಮಾಡುವುದಕ್ಕೆ ಶಕ್ತಿ ಇಲ್ಲದೆ ಇರುವುದರಿಂದ, ಈ ಕಾರ್ಖಾನೆಯನ್ನು ಸರ್ಕಾರದವರೇ ವಹಿಸಿಕೊಂಡು, ಇದನ್ನು ಬೇರೆ ಪ್ರದೇಶಕ್ಕೆ, ಒತ್ತಾಯವಿರತಕ್ಕಂಥ ಕಡೆಗೆ ವರ್ಗಾವಣೆ ಮಾಡತಕ್ಕ ವಿಚಾರದ ಬಗ್ಗೆ ಯೋಚನೆ ಮಾಡುತ್ತೀರ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಂಥ 60–70 ಕಾರ್ಖಾನೆಗಳನ್ನು ಉಗಾಂಡ ಮತ್ತು ಆಫ್ರಿಕಾದ ಇತರ ಕಡೆಗಳಲ್ಲಿ ಆ ಮಾಲೀಕರು ನಡೆಸುತ್ತಿದ್ದಾರೆ. ಅವರಿಗೆ ಶಕ್ತಿ ಇಲ್ಲದೆ ಕಾರ್ಖಾನೆ ಪ್ರಾರಂಭವಾಗದೆ ಇಲ್ಲ. ರೈತರಿಗೆ ಕಬ್ಬು ಬೆಳೆದು ಕೊಡುವುದಕ್ಕೆ ಶಕ್ತಿ ಇಲ್ಲದೆ ಇರುವುದರಿಂದ ಪ್ರಾರಂಭವಾಗಿಲ್ಲ.

Sri H. R. KESHAVA MURTHY.—Is the Government having any shares in the Sugar Company and if so, what is the percentage?

Sri M. V. KRISHNAPPA.—We have no shares; it is a private company.

Sri H. R. KESHAVA MURTHY.—You have given so many thousands of acres to this company; Are you charging any land revenue?

Sri M. V. KRISHNAPPA.—Lease amount includes land revenue.

ಶ್ರೀ ಜೆ. ದೇವಯ್ಯ.—ಎಷ್ಟು ಎಕರೆಗೆ ನೀರು ಒದಗಿಸಿದ್ದೀರ?

ಶ್ರೀ ಎಂ. ವಿ. ಕೃಷ್ಣಪ್ಪ.—300 ಚಿಲ್ಲರೆ ಎಕರೆ ಕಲ್ಟಿವೇಟ್ ಮಾಡಿದ್ದಾರೆ, ಅದಕ್ಕೆ ನೀರು ಕೊಟ್ಟಿದೆ.

ಶ್ರೀ ಜೆ. ದೇವಯ್ಯ.—ಈಗ 28 ಸಾವಿರ ರೂಪಾಯಿವರೆಗೆ ರೆಮಿಷ್ಷ್ ಕೊಡಬೇಕಾದರೆ, ಅದರಲ್ಲಿ ನೀರು ಕೊಟ್ಟಿರುವ ಭೂಮಿಗೆ ಎಷ್ಟು ಬಾಕಿ ಇದೆ, ಹಾಗು ನೀರು ಒದಗಿಸದೆ ಇರುವ ಭೂಮಿಗೆ ಎಷ್ಟು ಬಾಕಿ ಇದೆ?

ಶ್ರೀ ಎಂ. ವಿ. ಕೃಷ್ಣಪ್ಪ—ಅದು ನೀರು ಕೊಡದೆ ಇರುವ ಭೂಮಿಗೇ.

Sri G. V. GOWDA.—May I know in brief the terms of the Agreement between the Government and the Company?

Sri M. V. KRISHNAPPA.—In respect of what point?

Sri G. V. GOWDA.—In respect of supply of water, I want to know whether Government should supply water before rent could be realised and all that.

ಶ್ರೀ ಎಂ. ವಿ. ಕೃಷ್ಣಪ್ಪ.—ಏನೂ ಇಲ್ಲ. 30 ವರ್ಷ ಲೀಸ್ ಕೊಟ್ಟಿದೆ. ಮೊದಲನೆಯ 5 ವರ್ಷ ಎಕರೆಗೆ 5 ರೂಪಾಯಿನಂತೆ, 6ನೇ ವರ್ಷದಿಂದ 11ನೇ ವರ್ಷದವರೆಗೆ ರೂ. 50ರಿಂದ 100ರವರೆಗೆ, ಆಮೇಲೆ ಎಕರೆಗೆ 100 ರೂಪಾಯಿಗಳಂತೆ ಸರಿಯಾಗಿ ಕೊಡಬೇಕು. That is the term under which lease is given to those people.

Sri G. V. GOWDA.—Is there any condition incorporated in the terms of the lease agreement that Government should supply water before rent could be paid and that unless water is supplied, no rent would be paid?

Mr. SPEAKER.—The intention was to cultivate sugarcane and for that water should be supplied; sugarcane could not be cultivated without supply of water. It is open to the land-lord to be equitable and fair.

Sri G. V. GOWDA.—Is there such a condition?

Mr. SPEAKER.—There is no condition that rent need not be paid if water is not supplied.

Sri G. V. GOWDA.—Then, how can the Company ask for remission.

Sri M. V. KRISHNAPPA.—That we will decide, if it is allowed, we will allow.

ಶ್ರೀ ಪಿ. ಎಂ. ದೇವ್.—ಎಕರೆಗೆ 100 ರೂಪಾಯಿಗಳಂತೆ ಬೆಳೆದ ಭೂಮಿಯ ಬಗೆಗೆ ಮಾತ್ರವೋ, ಇಲ್ಲ ಎಲ್ಲಾ ಭೂಮಿಯ ವಿಷಯದಲ್ಲೂ ಅಷ್ಟೇ ಕೊಡಬೇಕೋ ?

ಶ್ರೀ ಎಂ. ವಿ. ಕೃಷ್ಣಪ್ಪ.—2,264 ಎಕರೆ 6 ಗುಂಟೆ ಜಮೀನು ಕೊಟ್ಟಿದೆ. ಅಷ್ಟು ಭೂಮಿಗೂ, ಬೆಳೆಯಲಿ ಬೆಳೆಯದೆ ಇರಲಿ, ಕೊಡಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—Contribution, Water-rate, ಇತ್ಯಾದಿ ಕೊಡುವವರು ಯಾರು ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಗ್ರಿಮೆಂಟ್ ಪ್ರಕಾರ ಅವರು ಕೊಡಬೇಕು.

ಶ್ರೀ ಜಿ. ಟಿ. ರಂಗಪ್ಪ.—ಫ್ಯಾಕ್ಟರಿ ಜನರು ಯಾರು ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾಧ್ವಾನಿ ಕಂಪನಿ, ಅವರು ಇಂಡಿಯನ್ಸ್, ಗುಗಾಂಡದಲ್ಲಿ ಹೋಗಿ ಸೆಟಲ್ ಆಗಿದ್ದಾರೆ. 30-40 ಕಾರ್ಖಾನೆ ನಡೆಸುತ್ತಿದ್ದಾರೆ. The first sugar factory that came into being after Independence was the Tungabhadra Sugar factory.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದುವರೆಗೆ ಸರ್ಕಾರಕ್ಕೆ ನಂದಾಯ ಮಾಡಿದ ರೆಂಟ್ ಎಷ್ಟು, ಬಾಕಿ ಎಷ್ಟು ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದು 1957ರಲ್ಲಿ ಕೊಟ್ಟಿದ್ದು. ಮೊದಲನೆಯ 5 ವರ್ಷ ಎಕರೆ ಒಂದಕ್ಕೆ 5 ರೂಪಾಯಿಗಳು, ಎಂದಿದೆ.

2,400 acres and 6 guntas have been given at the rate of five rupees for five years, out of which Rs. 28,000 is due and they claim it as remission.

ಶ್ರೀ ಜಿ. ವಿ. ಗೌಡ.—ಬಾಕಿ ವಸೂಲು ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದು ಕೊಂಡೀದ್ದೀರ ? Stay ಕೊಟ್ಟಿದ್ದೀರ ?

Sri M. V. KRISHNAPPA.—We are considering whether they are entitled to remission. If they are not entitled to it, then, they must pay it as land revenue.

ಶ್ರೀ ಟಿ. ಡಿ. ದೇವೇಂದ್ರಪ್ಪ.—22 ಸಾವಿರ ರೂಪಾಯಿ ಹಣ ಬಾಕಿಯಿದೆಯೆಂದು ಅಪ್ಪಣೆ ಕೊಡಿಸಿದಿರಿ. ಇದರಲ್ಲಿ ಬರತಕ್ಕಂಥ ಕಂದಾಯ ಎಷ್ಟು ಬಾಕಿ ಇದೆ ?

Mr. SPEAKER.—It has been answered.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಒಬ್ಬ ದೊಡ್ಡ ಕಾರ್ಖಾನೆ ಮನುಷ್ಯನಿಂದ 22 ಸಾವಿರ ರೂಪಾಯಿವರೆಗೆ ಬಾಕಿ ಇದೆ. ಒಬ್ಬ ಬಡವನಿಂದ 10 ರೂಪಾಯಿ ಕಂದಾಯ ಬಾಕಿ ಇದ್ದರೆ, ಜಮೀನು ಹರಾಜು ಮಾಡುತ್ತೀರಿ. ಇದರಲ್ಲಿ ಅಧಿಕಾರಿಗಳ ಕೈವಾಡವಿದೆಯೇ ?

Mr. SPEAKER.—Are you asking a question or are you debating ?

ಶ್ರೀ ಎಂ. ವಿ. ಕೃಷ್ಣಪ್ಪ.—ಶ್ರೀಮಾನ್ ದೇವೇಂದ್ರಪ್ಪನವರು ಆ ಭಾವನೆ ಇಟ್ಟುಕೊಂಡಿದ್ದಾರೆ. ಅದು ಶುದ್ಧ ತಪ್ಪು. ಇದು ಮಲೆನಾಡು ಅಭಿವೃದ್ಧಿಗಾಗಿ ಸ್ಥಾಪಿಸಿದ ಮೊದಲನೇ ಸಕ್ಕರೆ ಕಾರ್ಖಾನೆ. ಮುಖ್ಯಮಂತ್ರಿ ಶ್ರೀಮಾನ್ ನಿಜಲಿಂಗಪ್ಪನವರು ದೆಹಲಿಗೆ ಬಂದು ಸಾಧ್ಯವಾದಷ್ಟು ಅಲ್ಲಿನ ಸಹಾಯ ವನ್ನು ಈ ಕಂಪೆನಿಗೆ ಮಾಡುತ್ತೇವೆಂದು ಭರವಸೆಕೊಟ್ಟರು. ಮಲೆನಾಡು ಅಭಿವೃದ್ಧಿಯ ದೃಷ್ಟಿಯಿಂದ ಸಹಾಯ ಮಾಡಿದೆಯೇ ಹೊರತ , ಒಂದು ಕಾರ್ಖಾನೆಯವರಿಗೆ ಸಹಾಯ ಮಾಡ ಬೇಕೆಂಬ ದೃಷ್ಟಿಯಿಂದ ಮಾಡಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಸರ್ಕಾರಕ್ಕೆ ಬರುವ ಡ್ಯೂನನ್ನು ಬಾಕಿ ಬಿಟ್ಟಿರುವುದಕ್ಕೆ ಕಾರಣವೇನು ? ಜರೂರು ಪರಿಸ್ಥಿತಿ, ತುರ್ತು ಪರಿಸ್ಥಿತಿ ಎಂದು ಹೆಚ್ಚು ಟ್ಯಾಕ್ಸ್ ರೈತರ ಮೇಲೆ ಹಾಕುವ ಸಂದರ್ಭದಲ್ಲಿ, ಇದನ್ನು ವಸೂಲು ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರ ?

(No answer).

ಶ್ರೀ ಜೆ. ದೇವಯ್ಯ.—ಈ ಕಂಪೆನಿಯವರು ಮೈಸೂರಿನವರೇ ಅಥವಾ ಹೊರಗಿನವರೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲಾ ಇಂಡಿಯನ್ಸೇ ಇದ್ದಾರೆ. ಮೈಸೂರಿನವರೇ ಹೆಚ್ಚಾಗಿ ಇರಬೇಕಾಗುತ್ತದೆ.

ಅಧ್ಯಕ್ಷರು.—ಇಲ್ಲಿ ಆಸ್ತಿ ಪಡೆದುಕೊಂಡಿರುವವರು ಮೈಸೂರಿನವರಲ್ಲವೇ ?

ಶ್ರೀ ಜೆ. ದೇವಯ್ಯ.—ರೈತರು ಸ್ವಂತವಾಗಿ ಎಷ್ಟು ಟಿ ಕಬ್ಬು ಬೆಳೆಯುತ್ತಾ ಇದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—3100 ಚಿಲ್ಲರೆ ಎಕರೆ ಬಿಟ್ಟರೆ, ಮಿಕ್ಕಿದ್ದೆಲ್ಲಾ ರೈತರೇ ಬೆಳೆಯುತಕ್ಕಂಥಾದ್ದು.

ಶ್ರೀ ಕೆ. ಎಚ್. ರಂಗನಾಥ್.—ರೈತರ ತಪ್ಪು ನುಬಗಳನ್ನು ನೋಡುವುದಕ್ಕೆ ಅಧಿಕಾರ ಇಟ್ಟುಕೊಂಡಿದ್ದೀರ?

(No answer).

ಶ್ರೀ ಕೆ. ಎಚ್. ರಂಗನಾಥ್.—28 ಸಾವಿರ ರೂಪಾಯಿ ಯಾವ ಸಾಲನಿಂದ ಬಾಕಿಇದೆ?

Mr. SPEAKER.—Supplementaries have been repeated.

ಶ್ರೀ ಎಸ್. ಎಂ. ಕೃಷ್ಣ.—Write off ಮಾಡಬೇಕೆಂದು ಸರ್ಕಾರದವರು ಉದ್ದೇಶ ಮಾಡಿಕೊಂಡಿದ್ದಾರೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—Write off ಎಂದು ಕರೆಯುವುದಕ್ಕಾಗುವುದಿಲ್ಲ. Remission ಎಂದು ಕರೆಯಬೇಕಾಗುತ್ತದೆ. Remission Rules ಇವೆ, ಆ ರೂಲ್ಸ್ ಪ್ರಕಾರ ಹಾಗೆ ಮಾಡುವುದಕ್ಕೆ ಆಸ್ಪದವಿದ್ದರೆ ಮಾಡಬೇಕಾಗುತ್ತದೆ. ಇಲ್ಲದೆ ಹೋದರೆ ವಸೂಲು ಮಾಡುತ್ತೇವೆ.

ಶ್ರೀ ಗೋಪಾಲ ಸಾರೆನ್.—ಈ ಕಂಪೆನಿಯವರು ಬೇರೆ 7-8 ಕಾರ್ಖಾನೆಗಳನ್ನು ನಡೆಸುತ್ತಿದ್ದಾರೆ, experts, ದೊಡ್ಡವರು ಎಂದು ಹೇಳಿದಿರಿ. ಅಂಥವರು ಈ ಕೆಲಸವನ್ನೂ ಪೂರ್ತಿಗೊಳಿಸಿ ಉತ್ಪಾದನೆಯನ್ನು ಯಶಸ್ವಿಯಾಗಿ ಮಾಡಲಿಲ್ಲ. ಒಂದು ಕಡೆಯಲ್ಲ 28 ಸಾವಿರ ರೂಪಾಯಿ ಬಾಕಿ ಇಟ್ಟುಕೊಂಡಿದ್ದಾರೆ. ಇದನ್ನು ಸರ್ಕಾರದವರು ಹಾಗೆಯೇ ಬಿಟ್ಟರೆ, ಈ ರಾಜ್ಯಕ್ಕೆ ಅನ್ಯಾಯವಾಗಲಲ್ಲವೇ? ಇದರ ಬಗ್ಗೆ ಏನು ಆಕ್ಷೇಪಣೆ ತೆಗೆದುಕೊಳ್ಳುತ್ತೀರ?

ಶ್ರೀ ಎಂ. ವಿ. ಕೃಷ್ಣಪ್ಪ.—ಪಾಪ, ಅವರು ಇನ್ನೆಲ್ಲಿಯಾದರೂ ಹೋಗಿದ್ದರೆ, ಕೋಟ್ಯಾಂತರ ರೂಪಾಯಿ ಸಂಪಾದಿಸುತ್ತಿದ್ದರು. ನಮ್ಮನ್ನು ನಂಬಿ, ಮಲೆನಾಡಿಗೆ ಬಂದು ಕೆಟ್ಟಿದ್ದಾರೆ.

———

Appointment of Probationary Tahsildars and Block Development Officers.

*Q.—115. **Sri T. D. DEVENDRAPPA** (Bhadravathi).—

Will the Government be pleased to state :—

(*a*) the number of probationary Tahsildars and Block Development Officers appointed by them, since 1956 ;

(*b*) the reasons for appointing them in batches like 2nd, 3rd and 4th though they have been interviewed at one and the same time ?

*A.—**Sri M. V. KRISHNAPPA** (Minister for Revenue).—

(*a*) The number of probationary Tahsildars appointed since 1956 is as follows :—

Year	*No. of appointments made*
1958	50
1962	76

The number of Block Development Officers appointed since 1956 is as follows :

Year	*No. of appointments made*
1958	50
1961	67

(*b*) They were not appointed in three or four batches. But the appointments were made from out of the selected candidates as and